ಮಾಡಬೇಕು. ಸಂಬಂಧಪಟ್ಟ ಸಚಿವರು ಇದ್ದರೆ ಉತ್ತರ ಹೇಳುತ್ತಾರೆ. ಯುವಕರು ಇದನ್ನು ದಯವಿಟ್ಟು ಗಮನಿಸಿ. ಆಯಿತು ಈಗ ಶೂನ್ಯ ವೇಳೆ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು.

1. ವಿಷಯ: ದಿನಗೂಲಿ ನೌಕರರ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಮೊನ್ನೆ ನಾನು ಶೂನ್ಯ ವೇಳೆಯಲ್ಲಿ ದಿನಗೂಲಿ ನೌಕರರ ಬಗ್ಗೆ ಕೇಳಿದ್ದೆ. ಅದಕ್ಕೆ ಅವರಿಂದ ಉತ್ತರ ಬರಲಿಲ್ಲ.

ಅಧ್ಯಕ್ಷರು:– ಮಾನ್ಯ ಸಚಿವರೆ, ಕಡತ ತೆಗೆದು ನೋಡಿ. ಉತ್ತರ ಇದ್ದರೆ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:– ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು:– ಮಾನ್ಯ ಜಗದೀಶ್‌ಶೆಟ್ಟರ್‌ರವರೆ ತಮ್ಮ ಪ್ರಶ್ನೆ ಕೇಳುವುದು.

2. ವಿಷಯ: ನೈಸ್‌ಗೆ ಸಂಬಂಧಿಸಿದಂತೆ ಪತ್ರಿಕೆಯಲ್ಲಿ ಬಂದಿರುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, "ನಿನ್ನೆ ಕನ್ನಡ ಪ್ರಭ" ದಿನಪತ್ರಿಕೆಯಲ್ಲಿ ಸುದ್ದಿ ಬಂದಿದೆ ಏನೆಂದರೆ 'ನೈಸಾಗಿ ಬೆಂಕಿ ಬಿತ್ತು, ಅಧಿಕಾರಿಗಳಿಂದ ಅಕ್ರಮ ದಾಖಲೆ ನಾಶ' ಎಂದು. ಈ ನೈಸ್ ಬಗ್ಗೆ...

ಅಧ್ಯಕ್ಷರು:– ಅವೆಲ್ಲಾ ಬೇಡ.

ಶ್ರೀ ಜಗದೀಶ್ ಶೆಟ್ಟರ್:– ನೈಸ್ ಬಗ್ಗೆ ಸಮಗ್ರ ತನಿಖೆಗಾಗಿ ಒಂದು ಸದನ ಸಮಿತಿಯನ್ನು ತಾವು ಮಾಡಿದ್ದೀರಿ.

ಅಧ್ಯಕ್ಷರು:– ಹೌದು.

ಶ್ರೀ ಜಗದೀಶ್ ಶೆಟ್ಟರ್:– ಆ ಸಮಿತಿಗೆ ಮಾನ್ಯ ಜಯಚಂದ್ರರವರೆ ಅಧ್ಯಕ್ಷರಿದ್ದಾರೆ. ಅದರ ಬಗ್ಗೆ ಪ್ರಶ್ನೆ ಇಲ್ಲ. ಅದರ ಬಗ್ಗೆ discussion ಆಗಲಿ, file ತರಿಸಲಿ, ಅದರ ಬಗ್ಗೆ ಏನು ನಿರ್ಣಯ ಕೊಡುತ್ತಾರೆ ಕೊಡಲಿ. ಆದರೆ

ನಿನ್ನೆ ಪತ್ರಿಕೆಯಲ್ಲಿ ಬಂದಂತಹ ಗಂಭೀರತೆ ಏನೆಂದರೆ, ಇದಕ್ಕೆ ಸಂಬಂಧಪಟ್ಟ ಎಲ್ಲಾ ಕಾಗದಪತ್ರಗಳು, ಪ್ರಮುಖವಾದಂತಹ file ಗಳನ್ನು ನಾಶ ಮಾಡಿದ್ದೇವೆ ಎಂದು ಅವರು ಆ ಸದನ ಸಮಿತಿಗೆ ವರದಿ ಕೊಟ್ಟಿದ್ದಾರೆ. ನಾಶ ಮಾಡಿರುವುದರಿಂದ ನಾಳೆ ಸದನ ಸಮಿತಿಯಲ್ಲಿ ಯಾವುದನ್ನೂ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಏನಾದರೂ findings ಅನ್ನೂ ಮಾಡುವುದಕ್ಕೂ ಆಗುವುದಿಲ್ಲ. ಹೀಗಾಗಿ ಇದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಪತ್ರಿಕೆಯಲ್ಲಿ 'ಅಧಿಕಾರಿಗಳಿಂದ ಅಕ್ರಮ ದಾಖಲೆಗಳು ನಾಶ' ಎಂದು ಬಂದಿದೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ತಂದಿರುವಂತಹ ವಿಚಾರದ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಕಡೆಯಿಂದ ಉತ್ತರ ಒದಗಿಸುತ್ತೇನೆ. ಏಕೆಂದರೆ ಕೆಲವೊಂದು ವಿಚಾರಗಳು ಗೊತ್ತಿದ್ದರೂ ಕೂಡ ನಾನು ಮಾತನಾಡುವುದಕ್ಕೆ ಬರುವುದಿಲ್ಲ. ಅದನ್ನು ನಾನು ಅವರಿಂದ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು:– ಮಾನ್ಯ ಅಶೋಕ್‌ರವರು ಹಾಜರಿಲ್ಲ. ಮಾನ್ಯ ಅಶ್ವತನಾರಾಯಣರವರು ಹಾಜರಿಲ್ಲ. ಮಾನ್ಯ ಕೆ.ಎಂ. ತಿಮ್ಮರಾಯಪ್ಪನವರು ಮಾತನಾಡುವುದು.

3. ವಿಷಯ: ಕುಡಿಯುವ ನೀರಿನ ಬಗ್ಗೆ.

ಶ್ರೀ ಕೆ.ಎಂ. ತಿಮ್ಮರಾಯಪ್ಪ (ಪಾವಗಡ):– ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ವಿಚಾರವಾಗಿ ಪಾವಗಡ ತಾಲ್ಲೂಕಿನಲ್ಲಿ ತುಂಬಾ ಸಮಸ್ಯೆ ಇರುವಂಥದ್ದನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನಕ್ಕೆ ತರುತ್ತಿದ್ದೇನೆ. ದಯವಿಟ್ಟು ಅಲ್ಲಿನ ಸಮಸ್ಯೆಯನ್ನು ಹೋಗಲಾಡಿಸಿ ಕುಡಿಯುವ ನೀರಿನ ಬಗ್ಗೆ ತ್ವರಿತವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿಸಿ. ಇದಕ್ಕೆ ತುಂಗಭದ್ರಾ ಡ್ಯಾಂನಿಂದ ನೀರನ್ನು ಒದಗಿಸುವ ಪ್ರಸ್ತಾವನೆ ಆರ್.ಡಿ.ಪಿ.ಆರ್ ನಲ್ಲಿ ಪ್ರಸ್ತಾವನೆ ಇದೆ.